**ದಿನಾಂಕಃ 09.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ**

ನನ್ನ ಪತಿಯ ಹೆಸರು ಕಿರಣ . ಅವರು ಬೆಂಗಳೂರಿನಲ್ಲಿ ನಲ್ಲಿಯ ಕೆಲಸ ಮಾಡುತ್ತಾರೆ, ಅವರು ಆರೋಗ್ಯವಾಗಿರುತ್ತಾರೆ ಎಂದರೆ ಸರಿ . 10 ವರ್ಷದಿಂದ ಅವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೂ ಮುಂಚೆ ಚನ್ನರಾಯಪಟ್ಟಣದಲ್ಲಿ ವಾಸವಿದ್ದೆವು. ಇಲ್ಲಿ ಕೇಬಲ್ ಕೆಲಸ ಮಾಡುತ್ತಿದ್ದರು. ನಾನು ವಿಳಾಸವನ್ನು ವಾರ್ಡ್ ನಂ. 10, ಗಾಯಿತ್ರಿ ಬಡಾವಣೆ , ನಾಗಸಮುದ್ರ ರಸ್ತೆ , ಚನ್ನರಾಯಪಟ್ಟಣ ಟೌನ್ ಎಂದು ನೀಡಿರುತ್ತೇನೆ. ಅದು ನಮ್ಮ ಸ್ವಂತ ಮನೆ ಆ ಮನೆಯಲ್ಲಿ ನಮ್ಮ ಭಾವ ಇದ್ದರು ನಾವು ಎಡಿ ಕಾಲೋನಿಯಲ್ಲಿ ಬಾಡಿಗೆ ಇದ್ದೆವು. ನನ್ನ ಪತಿಯ ಅಣ್ಣ ಪ್ರದೀಪ ರವರು ನಮ್ಮ ಸ್ವಂತ ಮನೆಯಲ್ಲಿ ವಾಸ ಇದ್ದರು. ನಾವು ಎ ಡಿ ಕಾಲೋನಿಯಲ್ಲಿ ಕೃಷ್ಣಪ್ಪರವರ ಮನೆಯಲ್ಲಿ ಇದ್ದೆವು. ಬಾಡಿಗೆಗೆ ಇದ್ದೆವು. ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ಅದರ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಆಧಾರ್ ಕಾರ್ಡ್ ಹೊರತು ಪಡಿಸಿ ಬೇರೆ ದಾಖಲಾತಿ ಕೊಟ್ಟಿರುವುದಿಲ್ಲ. ನಾಗಸಮುದ್ರ ರಸ್ತೆಯಲ್ಲಿರುವ ಮನೆ ನನ್ನ ಪತಿಯ ತಾಯಿಯಾದ ಸರೋಜ ಹೆಸರಿನಲ್ಲಿರುತ್ತದೆ ಎಂದರೆ ಸರಿ . ನಾನು ಸರೋಜ ನನ್ನ ಪತಿ ಆ ಮನೆಯಲ್ಲಿ ಒಟ್ಟಿಗೆ ವಾಸ ಇದ್ದೆವೆ ಎಂದರೆ ಸರಿಯಲ್ಲ. ನನ್ನ ಪತಿಯವರು ವಾರ್ಡ ನಂ. 74 ಮಾಚ್ವಳ್ಳಿ ಬೆಂಗಳೂರಿನಲ್ಲಿ ವಾಸವಿರುತ್ತಾರೆ. ಅದರ ಬಗ್ಗೆ ದಾಖಲಾತಿ ಕೊಟ್ಟಿರುವುದಿಲ್ಲ. ನನ್ನ ಪತಿಯವರು ಕುಟುಂಬದ ದರ್ದಿಗಾಗಿ ಎದುರುದಾರರಿಂದ 5 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಅಸಲು ದಾವಾ ನಂ. 15/2017 ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ಪತಿಯವರಿಗೆ ನನ್ನ ಅತ್ತೆಯ ಮನೆಯ ವಿಳಾಸಕ್ಕೆ ಸಮನ್ಸ್ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ, ಆ ವಿಚಾರ ನನ್ನ ಪತಿಯವರಿಗೆ ಗೊತ್ತು ಅವರು

ನ್ಯಾಯಾಲಯಕ್ಕೆ ಬಂದರೆ ನಿಜಾಂಶ ಗೊತ್ತಾಗುತ್ತದೆ ಎಂದು ನನಗೆ ಜಿಪಿಎ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿ ಹಾಗೂ ಎದುರುದಾರರು ಏನು ವ್ಯವಹಾರ ಮಾಡಿಕೊಂಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಯಾವುದೇ ವ್ಯವಹಾರ ಮಾಡಿಲ್ಲ ಎಂದು ಹೇಳುತ್ತಾರೆ. ಎಕ್ಸ್ 10/2018 ರಲ್ಲಿ ಅಮಲ್ಜಾರಿ ಕೇಸನ್ನು ಎದುರುದಾರರು ನನ್ನ ಪತಿಯ ವಿರುದ್ಧ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ಅರೆಸ್ಟ್ ವಾರೆಂಟ್ ಆಗಿದ್ದು ನನ್ನ ಪತಿಯವರು ತಲೆ ಮರೆಸಿಕೊಂಡು ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎಕ್ಸ್ 10/2018 ರಲ್ಲಿ ನನ್ನ ಅತ್ತೆಯವರು ಜಿಪಿಎ ಪಡೆದದುಕೊಂಡು ಹಾಜರಾಗುತ್ತಾರೆ ಎಂದರೆ ಸರಿಯಲ್ಲ. ಎಕ್ಸ್ ಕೇಸಲ್ಲಿ ನಾಗಸಮುದ್ರ ರಸ್ತೆಯ ಗಾಯಿತ್ರಿ ಬಡಾವಣೆ ಯಲ್ಲಿರುವ ಮನೆ ಅಟಾಚ್ ಮಂಟ್ ಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಅದನ್ನು ತಿಳಿದ ನಾನು 5 ವರ್ಷಗಳ ನಂತರ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಮ್ಮ ಪಕ್ಕದ ಮನೆಯವರು ನಮ್ಮ ಮನೆಯನ್ನು ಹರಾಜು ಮಾಡಲಾಗುತ್ತದೆ ಎಂದು ತಮಟೆ ಬಾರಿಸಿ ಪ್ರಚಾರ ಪಡಿಸಿದಾಗ ತಿಳಿಯಿತು ಎಂದು ಹೇಳುತ್ತಾರೆ. ನಮಗೆ ಮುಂಚೆಯೇ ಗೊತ್ತಿರುತ್ತದೆ ಎದುರುದಾರರಿಗೆ ಹಣ ಕೊಡಬೇಕಾಗುತ್ತದೆ ಎಂದು ನನ್ನ ಪತಿ ತಲೆ ಮರೆಸಿಕೊಂಡು ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಸ್ವಂತ ಮನೆ ಹಾಗೂ ನಾವು ವಾಸ ಇದ್ದ ಮನೆಗೆ 200 ಮೀ ದೂರ ಇದೆ. ನಾನು ಎಡಿ ಕಾಲೋನಿ ಚನ್ನರಾಯಪಟ್ಟಣಕ್ಕೆ ಸಂಬಂದಪಟ್ಟಂತೆ ಪಡಿತರ ಚೀಟಿ ಆದಾರ್ ಕಾರ್ಡ್ ಹೊಂದಿರುತ್ತೇನೆ. ಪ್ರತಿ ತಿಂಗಳು ಪಡಿತರವನುನ ಪಡೆಯುತ್ತೇನೆ. ನಾನು ಪಡಿತರವನ್ನು ಪಡೆದುಕೊಂಡು ಅದೇ ವಿಳಾಸದಲ್ಲಿ ಇದ್ದು ಈಗ ಬೆಂಗಳೂರಿನಲ್ಲಿ ವಾಸ ಇದ್ದೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಕ್ಸ್ 10/2018 ರಲ್ಲಿ ಹಣ ಕೊಡಬೇಕಾಗುತ್ತದೆ ಎಂದು ಈ ಸುಳ್ಳು ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪತಿಯವರು ಹಣವನ್ನು ಪಡೆದುಕೊಂಡ ಬಗ್ಗೆ ಪ್ರೊನೋಟನ್ನು ಬರೆದುಕೊಟ್ಟಿದ್ದು ಹಾಗೂ ಬಡ್ಡಿಯನ್ನು ಅದರಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಣವನ್ನು ಕೊಡಬೇಕೆಂದು

ಆದೇಶವಾದ್ದರಿಂದ ಹಣವನ್ನು ಕೊಡಬೇಕಾಗುತ್ತದೆ ಎಂದು ಈ ಸುಳ್ಳು ಅರ್ಜಿಯನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ